Kind Attn
DC - (e-gov)

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆ ಇಲಾಖೆ)

ಸಂ:ವಾತಾ:/ಸಿಆರ್-02/2015-16/ಬಿ- 430

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಚೇರಿ,
(ಜಾರಿ) ಉತ್ತರ ವಲಯ, ಕ್ಲಬ್ ರಸ್ತೆ,
"ಸುಮೌಲ್ಯ ಸೌಧ" 4ನೇ ಮಹಡಿ, ಬೆಳಗಾವಿ.
ದಿನಾಂಕ: 12.06.2015.
ದೂರವಾಣಿ ಸಂಖ್ಯೆ: 0831-2407370

42 1495/15-16.
8.17-6-15

## : ಪ್ರಕಟಣೆ :

ವಿಷಯ:-2015-16ನೇ ಸಾಲಿಗೆ ಬೆಳಗಾವಿ (ಜಾರಿ), ವಿಭಾಗದ ವಿವಿಧ ಕಛೇರಿಗಳ ಸರ್ಕಾರಿ ವಾಹನಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರ ಸೇವೆಯನ್ನು ಖಾಸಗಿ ಏಜೇನ್ಸಿಗಳಿಂದ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ:-1) ಸರ್ಕಾರಿ ಅಧಿಸೂಚನೆ ಕೆಎಇ 89 ಎಲ್‌ಎಮ್‌ಡಬ್ಲ್ಯು 2008, ದಿನಾಂಕ 04.07.2012.
2) ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು ಇವರ ಪತ್ರ ಸಂಖ್ಯೆ:ವಿಹೆಚ್‌ಟಿ:ಸುತ್ತೋಲೆ-2: 2014-15:ದಿನಾಂಕ : 31.03.2015.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2015-16ನೇ ಸಾಲಿಗೆ ಅಂದರೆ ದಿನಾಂಕ 01.07.2015ರಿಂದ 31.03.2016ರ ವರೆಗೆ ಈ ವಿಭಾಗದ ಅಧೀನ ಕಛೇರಿಗಳ ಸರ್ಕಾರಿ ವಾಹನಗಳಿಗೆ 05 ವಾಹನ ಚಾಲಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಖಾಸಗಿ ಸಂಸ್ಥೆಗಳಿಂದ ಪಡೆದುಕೊಳ್ಳಲು ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು, ಬೆಂಗಳೂರು ಉಲ್ಲೇಖ (2)ರನ್ವಯ ಅನುಮತಿಯನ್ನು ನೀಡಿರುತ್ತಾರೆ. ಅದರಂತೆ, ಈ ಕೆಳಕಂಡ ಕಛೇರಿಗಳಲ್ಲಿ ಖಾಸಗಿ ವಾಹನ ಚಾಲಕರ ಸೇವೆಯು ಬೇಕಾಗಿರುತ್ತದೆ.

| ಅನಂ | ಕಛೇರಿಯ ಹೆಸರು | ವಾಹನ ಚಾಲಕರ ಸಂಖ್ಯೆ |
|---|---|---|
| 1. | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಬೆಳಗಾವಿ, | 01 |
| 2 | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಜಾರಿ), ವಿಜಯಪುರ | 01 |
| 3 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಜಾರಿ), ನಿಪ್ಪಾಣಿ, | 01 |
| 4 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಜಾರಿ), ಬಾಗಲಕೋಟ | 01 |
| 6 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಜಾರಿ), ಬೈಲಹೊಂಗಲ | 01 |
| | ಒಟ್ಟು | **05** |

ಈ ಮೇಲೆ ತಿಳಿಸಿದಂತೆ 05 ವಾಹನ ಚಾಲಕರ ಸೇವೆಯನ್ನು ಖಾಸಗಿ ಏಜೇನ್ಸಿಗಳಿಂದ ಪಡೆಯಲು ಈ ಕೆಳಗೆ ನಮೂದಿಸಿರುವ ಷರತ್ತಿಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದೆ.

## : ಷರತ್ತುಗಳು :

1. ಈ ಟೆಂಡರ ಪ್ರಕ್ರಿಯೆಯಲ್ಲಿ ಭಾಗವಹಿಸುವ ಏಜೇನ್ಸಿಗಳು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರತಕ್ಕದ್ದು.
   - ಏಜೇನ್ಸಿಗಳು ಕಳೆದ ಎರಡು ವರ್ಷಗಳಲ್ಲಿ ಯಾವುದೇ ರಾಜ್ಯ, ಕೇಂದ್ರ ಅಥವಾ ಖಾಸಗಿ ಸಂಸ್ಥೆಗಳಿಗೆ, ಕಾರ್ಪೋರೇಷನ್‌ಗಳಿಗೆ ಸುಮಾರು 20 ಚಾಲಕರ ಸೇವೆಯನ್ನು ಪೂರೈಸಿರುವ ಅನುಭವವನ್ನು ಹೊಂದಿರಬೇಕು ಹಾಗೂ ಈ ಬಗ್ಗೆ ಸೂಕ್ತ ದಾಖಲೆಯನ್ನು (ಅನುಭವ ಪ್ರಮಾಣ ಪತ್ರ ಅಥವಾ ಸೇವಾ ಪ್ರಮಾಣ ಪತ್ರ) ಸಲ್ಲಿಸುವುದು.
   - ಏಜೇನ್ಸಿಯ ವಾರ್ಷಿಕ ವಹಿವಾಟು ಕಳೆದ ಎರಡು ವರ್ಷಗಳಲ್ಲಿ 10.00 ಲಕ್ಷಗಳಿಗಿಂತ ಕಡಿಮೆ ಇರಬಾರದು.
   - ಏಜೇನ್ಸಿಯು ಇಎಸ್‌ಐ, ಇಪಿಎಫ್ ಮತ್ತು ಸೇವಾ ತೆರಿಗೆಯ ನೋಂದಣಿಯನ್ನು ಪಡೆದಿರಬೇಕು. ಈ ಬಗ್ಗೆ ದಾಖಲೆಗಳನ್ನು ಸಲ್ಲಿಸುವುದು.
   - ಏಜೇನ್ಸಿಯವರು ವೃತ್ತಿ ತೆರಿಗೆ ನೋಂದಣಿ ಮಾಡಿಸಿ ತೆರಿಗೆಯನ್ನು ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಬೇಕು.
   - ಪೋಲಿಸ ಇಲಾಖೆಯಿಂದ ಅನುಮತಿ / NOC ಪಡೆದಿರುವ ಪತ್ರ.
   - ಕಂಪನಿ ಪ್ಯಾನ ಕಾರ್ಡ ಒದಗಿಸುವುದು.
   - ಕಳೆದ ಮೂರು ವರ್ಷಗಳಲ್ಲಿ ಏಜೇನ್ಸಿಯು ಯಾವುದೇ (Black List) ಕಪ್ಪು ಪಟ್ಟಿಗೆ ಸೇರಿಲ್ಲ ಎಂಬ ಬಗ್ಗೆ ದೃಢೀಕರಣ ಪತ್ರ ಒದಗಿಸುವುದು.
2. ಟೆಂಡರಿನಲ್ಲಿ ಭಾಗವಹಿಸುವ ಏಜೇನ್ಸಿಗಳು ಬೆಳಗಾವಿ, ಬಾಗಲಕೋಟ, ವಿಜಯಪುರ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರಬೇಕು.
3. ಏಜೇನ್ಸಿಯಿಂದ ಪಡೆಯಲಾಗುವ ಒಬ್ಬ ವಾಹನ ಚಾಲಕರಿಗೆ ಮಾಸಿಕ ವೆಚ್ಚ ರೂ 7266-00 ಮತ್ತು ಇಪಿಎಫ್ ರೂ 620/-, ಇಎಸ್‌ಐ, ರೂ 345/- ಮತ್ತು ಸೇವಾ ತೆರಿಗೆ ರೂ 1152/- ಒಟ್ಟು ರೂ 9,383/-ಗಳನ್ನು ಇಲಾಖಾ ವತಿಯಿಂದ ಭರಿಸಲಾಗುವುದು.
4. ಸದರಿ ಏಜೇನ್ಸಿಯವರು ಇಲಾಖೆ ವಂತಿಕೆಯ ಇಪಿಎಫ್, ಇಎಸ್‌ಐ ಮತ್ತು ಇಲಾಖೆ ಭರಿಸುವ ಸೇವಾ ತೆರಿಗೆಗಳನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಪಾವತಿಸುವುದು ಈ ಬಗ್ಗೆ ಪ್ರತಿ ತಿಂಗಳು ದಾಖಲಾತಿಗಳನ್ನು ಈ ಕಛೇರಿಗೆ ಸಲ್ಲಿಸಬೇಕು.
5. ಈ ಟೆಂಡರಿನಲ್ಲಿ ಭಾಗವಹಿಸುವ ಏಜೇನ್ಸಿಗಳು ಒಂದು ವಾಹನ ಚಾಲಕರ ಸೇವೆಯನ್ನು ಒದಗಿಸಲು ವಿಧಿಸುವ ಸೇವಾ ಶುಲ್ಕವನ್ನು ನಮೂದಿಸಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವುದು.
6. ಅತಿ ಕಡಿಮೆ ಸೇವಾ ಶುಲ್ಕವನ್ನು ನಮೂದಿಸಿ ಸಲ್ಲಿಸುವ ಖಾಸಗಿ ಏಜೇನ್ಸಿಗಳಿಂದ ವಾಹನ ಚಾಲಕರ ಸೇವೆಯನ್ನು ಪಡೆಯಲಾಗುವುದು.